**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ**

**ಸಿ.ಸಿ. ಸಂಃ54/2024**

| | | | |
|---|---|---|---|
| **ಹೆಸರು** | ಪ್ರತಿಭಾ ಆರ್ | **ಪಿಡಬ್ಲ್ಯೂ:** | 04 |
| **ಗಂಡನ ಹೆಸರು** | ರವಿಶಂಕರ | **ಸಿಡಬ್ಲ್ಯೂ:** | 05 |
| **ವಯಸ್ಸು** | 45 ವರ್ಷ | | |
| **ಉದ್ಯೋಗ** | ತಜ್ಞವೈದ್ಯೆ ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರ | | |
| **ವಾಸಸ್ಥಳ** | ಕುಶಾಲನಗರ | | |

**ದಿಃ 28.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಕುಶಾಲನಗರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕಳೆದ 8 ವರ್ಷಗಳಿಂದ ತಜ್ಞವೈದ್ಯೆಳಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 28.01.2024 ರಂದು ರಾತ್ರಿ 8.05 ಗಂಟೆ ಸಮಯದಲ್ಲಿ ಹೊಡೆದಾಟದ ಹಿನ್ನೆಲೆಯಲ್ಲಿ ಗಾಯಗೊಂಡಿರುವುದಾಗಿ ಚಾಸಾ-1 ಸತೀಶರವರು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದಾಗ ಅವರನ್ನು ನಾನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

1. Abrasion over the right side of cheek measuring 3x2cm
2. Swelling over the right upper limb (Arm)
3. Broken 4 teeth (upper 2 in left inseizer and 2 left canine).

The injuries No.1 and 2 are simple in nature. The injury No.3 grievous in nature. In this regard I have issued the wound certificate and the same is marked at **Ex.P-3** and witness signature is marked at **Ex.P-3(a)**.

ಒಬ್ಬ ವ್ಯಕ್ತಿ ಕೈಯಿಂದ ಹೊಡೆದಾಗ ಹಲ್ಲುಗಳು ಮುರಿದು ಹೋಗುವ ಸಾಧ್ಯತೆ ಇದೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎನ್.ಕೆ. ವಕೀಲರಿಂದಃ</u>**

ನಾನು ಸ್ತ್ರೀರೋಗ ತಜ್ಞೆ ವೈದ್ಯೆಳಾಗಿದ್ದೇನೆ. ನಮ್ಮ ಆಸ್ಪತ್ರೆಯಲ್ಲಿ ದಂತ ವೈದ್ಯರು ಇದ್ದಾರೆ. ನಿ.ಪಿ-3 ರಲ್ಲಿ ಯಾರಿಂದ ಹಲ್ಲೆಯಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ಗಾಯಾಳು ಮದ್ಯಪಾನ ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂದು ನಾನು ತಪಾಸಣೆ ಮಾಡಿಲ್ಲ. ಬೈಲಕುಪ್ಪೆ ಮತ್ತು ಕೊಪ್ಪದಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ.

ನಿ.ಪಿ-3 ರಲ್ಲಿ ಗಾಯ ಯಾವ ಸಮಯದಲ್ಲಿ ಆಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಗಾಯಾಳುವಿಗೆ ನಮ್ಮ ಆಸ್ಪತ್ರೆಗೆ ಚಿಕಿತ್ಸೆ ನೀಡಿರುವ ಬಗ್ಗೆ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಮಾಹಿತಿ ನೀಡಿಲ್ಲ. ನಿ.ಪಿ-3 ರ ದಾಖಲೆಗೆ ಸಂಬಂಧಿಸಿದಂತೆ ಪೊಲೀಸರು ನನ್ನಿಂದ ಅಭಿಪ್ರಾಯ ಪಡೆದಿರುವುದಿಲ್ಲ. ಗಾಯಾಳುವಿಗೆ ದಂತ ವೈದ್ಯರ ಬಳಿ ಹೋಗುವಂತೆ ತಿಳಿಸಿದ್ದೇನೆ. ದಂತ ವೈದ್ಯರಿಂದ ವರದಿ ಬಂದಿಲ್ಲ.

ದಂತ ವೈದ್ಯರ ಅಭಿಪ್ರಾಯದ ಮೇರೆಗೆ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಅಭಿಪ್ರಾಯ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಹಲ್ಲುಗಳು ಘಟನೆಗೆ ಹಿಂದೆಯೇ ಬಿದ್ದು ಹೋಗಿತ್ತೆ ಅಥವಾ ಇಲ್ಲವೇ ಎಂಬ ಬಗ್ಗೆ ಅಭಿಪ್ರಾಯ ನೀಡಲು ದಂತ ವೈದ್ಯರು ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿ ಮದ್ಯಪಾನ ಮಾಡಿ ಬೈಕ್ ನಿಂದ ಬಿದ್ದರೆ ನಿ.ಪಿ-3 ರಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ-1 ನನ್ನ ಬಳಿ ಯಾವುದೇ ಚಿಕಿತ್ಸೆ ಪಡೆದಿಲ್ಲದಿದ್ದರೂ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**